(*b*) the period of teaching experience of these Assistant Professors at the time of their promotion;

(*c*) whether there are any instances when the Government have relaxed the conditions of minimum period of teaching experience of three years while promoting teaching staff as Assistant Professors ?

SRI H. SIDDAVEERAPPA (Minister for Health).—

(*a*) 69.

(*b*) Over three years.

(*c*) No.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಲೆಕ್ಚರರ್ಸ್, ಅಸಿಸ್ಟೆಂಟ್ ಪ್ರೊಫೆಸರ್ಸ್, ಪ್ರೊಫೆಸರ್ಸ್, ಇವರುಗಳನ್ನು ನೇಮಕ ಮಾಡಿಕೊಳ್ಳುವಾಗ ಮತ್ತು ಪ್ರಮೋಷನಲ್ ವೇಕೆನ್ಸಿಗಳನ್ನು ಭರ್ತಿ ಮಾಡುವಾಗ ಈಗ ಹಾಲಿ ಅನುಸರಿಸತಕ್ಕಂಥ ಕ್ರಮಗಳೇನು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಚ್. ಸಿದ್ದವೀರಪ್ಪ.—ಈಗಿನ ರೂಲ್ಸ್ ಪ್ರಕಾರ Lecturers will have to be recruited. So far as Assistant Professors are concerned; 50% are taken by direct recruitment and 50% by promotion.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—3 ವರ್ಷಗಳ ಕಾಲ ಟೀಚಿಂಗ್ ಎಕ್ಸ್‌ಪೀರಿಯನ್ಸ್ ಇದ್ದವರಿಗೆ ಮಾತ್ರ ಅಸಿಸ್ಟೆಂಟ್ ಪ್ರೊಫೆಸರ್ಸ್ ದರ್ಜೆಗೆ ಪ್ರಮೋಷನ್ ಕೊಡುತ್ತೇವೆಂದು ಹೇಳುತ್ತೀರಿ? ಆದರೆ ಪ್ರಮೋಷನಲ್ ವೇಕೆನ್ಸಿಯಲ್ಲಿಯೂ ರಿಜರ್‌ವೇಷನ್ ಕೊಡುವೇಕೆಂಬ ತಪ್ಪವನ್ನು ಸುಪ್ರೀಂ ಕೋರ್ಟಿನ ಜಜ್‌ಮೆಂಟಿನಲ್ಲಿ ನಮೂದು ಮಾಡಲಾಗಿದೆ. ಮತ್ತೂ ಈ ಸರ್ಕಾರವೂ ಸಹ ಅದರಂತೆ ಕೊಡುತ್ತೇವೆಂದು ಅಭಯ ನೀಡಿದೆ. ಈಗ ಹಾಲಿ ಅಸಿಸ್ಟೆಂಟ್ ಪ್ರೊಫೆಸರ್ಸ್ ಮತ್ತು ಅದಕ್ಕೂ ಮೇಲಿನ ದರ್ಜೆಯ ಪೋಸ್ಟ್‌ಗಳಲ್ಲಿ ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಜನಾಂಗದವರಿಗೆ ನ್ಯಾಯವಾದ ಪ್ರಾತಿನಿಧ್ಯ ಸಿಗದ ಕಾರಣ, ಅವರುಗಳು ಕೀಳುದರ್ಜೆಯಲ್ಲಿ ಮತ್ತು ಅಧೋಗತಿಯಲ್ಲಿದ್ದಾರೆ. ಆದಕಾರಣ ಇವರುಗಳಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸಿ ಕೊಡುವುದಕ್ಕೆ ತಾವೇನಾದರೂ ಏರ್ಪಾಡು ಮಾಡಿದ್ದೀರಾ ?

SRI H. SIDDAVEERAPPA.—Whevever there are qualified candidates among the Scheduled Castes, they have invariably been taken. But in the case of promotional vacancies, trouble will arise If we take them against the seniority of others. If there are sufficient number of Scheduled Caste candidates, they are taken and their claims are never overlooked.

Registration of Durgambika Service Co-operative Society

797 SMT. NAGAMMA C. KESHAVA MURTHY (Davangere)—Will the Minister for Co-operation be pleased to State.—

(a) whether the Government have received an application from Durgambika Service Co-operative Society for registration ;

(*b*) when was the resolution passed by the Panchayat for the formation of this Society, the reason for the long delay ?

SRI K. H. RANGANATH (Minister for Co-operation,).—

(*a*) Yes.

(*b*) 15th June 1973

The area of operation proposed is already covered by the existing Society at Siramagondanahalli,

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ.—ಈ ಪಂಚಾಯಿತಿಯವರು ಒಂದು ನಿರ್ಣಯ ಪಾಸ್ ಮಾಡಿ ಎರಡು ವರ್ಷಗಳ ಮೇಲಾದರೂ ನಹ ಅಲ್ಲಿ ಒಂದು ಸಂಘವನ್ನು ರಚನೆ ಮಾಡುವುದಕ್ಕೆ ಇನ್ನೂ ಅನುಮತಿ ಕೊಡದಿರಲು ಕಾರಣವೇನು ? ಈ ಹಿಂದೆ ನಿಟ್ಟವಳ್ಳಿ ಮತ್ತು ಸಿರಮಾಗೊಂಡನಹಳ್ಳಿಗಳೆರಡಕ್ಕೂ ಸೇರಿದಂತೆ ಒಂದು ಸಂಘವಿತ್ತು. ಆದರೆ ಈಗ ಈ ಎರಡು ಹಳ್ಳಿಗಳಿಗೂ ಬೇರೆ ಬೇರೆ ಗ್ರೂಪ್ ಪಂಚಾಯಿತಿಗಳಿಗೆ ಸೇರಿರುವುದರಿಂದ ಬೇರೆ ಒಂದು ಸಂಘವನ್ನು ರಿಜಿಸ್ಟರ್ ಮಾಡುವುದಕ್ಕೆ ಏನು ತೊಂದರೆಯಿದೆ?

† ಶ್ರೀ ಕೆ. ಎಚ್, ರಂಗನಾಥ್.—ಅದು ಮಯಬಲ್ ಆಗದಿರುವುದರಿಂದ ಅದನ್ನು ರಿಜಿಸ್ಟರ್ಡ್ ಮಾಡುವುದಕ್ಕೆ ತೊಂದರೆಯಾಗಿದೆ. ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 380 ಕೋ ಆಪರೇಟಿವ್ ಸೊಸೈಟಿಗಳಿವೆ. ಅವುಗಳಲ್ಲಿ ಕೇವಲ 11 ಮಾತ್ರ ಮಯಬಲ್ ಆಗಿವೆ. ಮಿಕ್ಕವು ನಾನ್ ಮಯಬಲ್ ಆಗಿವೆ. ಜೊತೆಗೆ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ವೀಕ್ ಆದಂಥ ಡಿಸ್ಟ್ರಿಕ್ಟ್ ಬ್ಯಾಂಕ್‌ಗಳಿವೆ. ಈ ಎಲ್ಲ ದೃಷ್ಟಿಯಿಂದ, ಕಾಮತ್ ರಿಪೋರ್ಟ್ ಪ್ರಕಾರ ಇವುಗಳನ್ನು ರೀ—ಆರ್ಗನೈಜೇಷನ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು, ಅದರಂತೆ ಈಗ ಮಾಡುತ್ತಿದ್ದೇವೆ.

ಅದರ ಪ್ರಕಾರ ಕನಿಷ್ಠ 3-4 ಸಾವಿರ ಎಕರೆ ಭೂಮಿ ಇರಬೇಕಾಗುತ್ತದೆ. ಅಲ್ಲಿ ವ್ಯವಸಾಯದ ರೈತ ಕುಟುಂಬಗಳು ಇರಬೇಕಾಗುತ್ತವೆ. ಅದಕ್ಕಾಗಿ 2ಸಾವಿರ ರೂಪಾಯಿಗಳ ವ್ಯವಹಾರ ಮಾಡಬೇಕಾಗುತ್ತದೆ. ಹಾಗಾದರೆ ಮಯಬಲ್ ಆಗುತ್ತದೆ. ಇಲ್ಲದಿದ್ದರೆ ಮಯಬಲ್ ಆಗುವುದಿಲ್ಲ. ಇದರ ಬಗ್ಗೆ ಈಗಾಗಲೇ ರೀಆರ್ಗನೈಜೇಷನ್ ಮಾಡುತ್ತಾ ಇರುವುದರಿಂದ ಇದನ್ನು ಈಗ ಮಾಡುವುದಕ್ಕಾಗುವುದಿಲ್ಲ. ಆದರೆ ನಿಟ್ಟುವಹಳ್ಳಿಯಲ್ಲಿ ಒಂದು ಸಾವಿರ ಎಕರೆಗಳಷ್ಟು ಭೂಮಿ ಇರುವುದರಿಂದ ಅಲ್ಲಿ ರಿಜಿಸ್ಟರ್ ಮಾಡುವುದಕ್ಕೆ ಅಪ್ಪಣೆ ಕೊಟ್ಟರೆ ಅದು ಮಯಬಲ್ ಆಗುವುದಿಲ್ಲ. ಅದಕ್ಕಾಗಿ ಮತ್ತೆ ಆ ಸೊಸೈಟಿ ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ. ಒಂದು ಗ್ರೂಪ್ ಪಂಚಾಯಿತಿಗೆ ಒಂದು ಸೊಸೈಟಿ ಇರುವುದನ್ನು ಹಿಂದೆ ಸರ್ಕಾರ ಗಮನಿಸಿತ್ತು, ಈಗ ಲೇಬರ್ ಪಾಶ್ಯಲೇಷನ್ ಅಲ್ಲಿ ಹೆಚ್ಚಿಗೆ ಇರುವುದರಿಂದ, ನಿಡುವಳ್ಳಿಯಲ್ಲಿ ಇದರ ಬಗ್ಗೆ ಅನುಕೂಲ ಮಾಡುವ ದೃಷ್ಟಿಯಿಂದ ಆ ಒಂದು ಸಹಕಾರಿ ಸಂಘವನ್ನು ರಿಜಿಸ್ಟರ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಆವಕ್ಕೆ ಮೊದಲೇ ಆ ರೀತಿಯಾಗಿ ಮಾಡುವುದರಿಂದ ಮಯಬಲ್ ಆಗುವುದಿಲ್ಲವೆಂಬುದಾಗಿ ಹೇಳಿದ್ದೇನೆ. ಅಲ್ಲಿ ಹೆಚ್ಚಿಗೆ ಲೇಬರರ್ಸ್ ಇದ್ದಾರೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ, ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಟಿ. ಎಸ್. ಮಂಜುನಾಥ್.—ಕೆಲವರು ಸಂಘಗಳಲ್ಲಿ ಅಕ್ರಮಗಳು ನಡೆಯುತ್ತಿದ್ದರೆ ಅವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ, ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಯಾವ ಆಬ್‌ಜೆಕ್ಷನ್ಸ್ ಬಂದರೂ ಅವನ್ನು ಪರಿಶೀಲನೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬುದಾಗಿ ಸರ್ಕಾರದ ಹುಕುಂ ಇದೆ. ಅಂಥಾದ್ದು ಇದ್ದರೆ ಅಂತಹ ವಿಚಾರಗಳನ್ನು ಗಮನಕ್ಕೆ ತಂದರೆ ಆದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.